# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/195/15-16

ದಿನಾಂಕ : 08-07-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ಎಚ್.ಎಂ ಬಸವರಾಜ ತಂದೆ ಕೆ.ಎಸ್ ಕೊಟ್ರುಬಸಯ್ಯ ಡಾ\|\|ಆರ್.ಎಸ್ ಹಿರೆಮಠ ಹರಿಹರ ಆಸ್ಪತ್ರೆ ಸಿರುಗುಪ್ಪ<br><br>(ಶ್ರೀ ಡಿ,ನಾರಾಯಣ ವಕೀಲರು, ಬಳ್ಳಾರಿ) | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನಿರೀಕ್ಷಕರು, ಬಳ್ಳಾರಿ<br>3. ಗ್ರಾಮಲೆಕ್ಕಾಧಿಕಾರಿಗಳು, ಕೋಳಗಲ್ಲು ಗ್ರಾಮ,<br>4.ಶ್ರೀ.ಎ.ಆಂಜನೆಯಲು ತಂದೆ ಎ.ವೆಂಕಟೇಶಲು ತಾಳೂರು ರಸ್ತೆ ಬಳ್ಳಾರಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಕೊಳಗಲ್ಲು | 788ಸಿ/2 ಪೈಕಿ | 00.05.50 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನೀರಿಕ್ಷಕರು, ಬಳ್ಳಾರಿ ಇವರ ಎಂ.ಆರ್.ನಂ.49/97-98 ದಿನಾಂಕ: 09-10-1997 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 01-04-2016 ಮತ್ತು 08-07-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 08/07/2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ , ಬಳ್ಳಾರಿ ತಾಲ್ಲೂಕಿನ ಕೊಳಗಲ್ಲು ಗ್ರಾಮದ ಸ.ನಂ 788ಸಿ/2 ಪೈಕಿ ವಿಸ್ತೀರ್ಣ: 00.05.50 ಎಕರೆ ಜಮೀನನ್ನು ಶ್ರೀಮತಿ ಅಜೀಜಾ ಬೀ ಇವರ ಜಿ.ಪಿ.ಎ ಹೋಲ್ಡರ್ ಶ್ರೀ ಎ.ಆಂಜನೆಯಲು ಮಹಾನಂದಿ ಕೊಟ್ಟಂ ಬಳ್ಳಾರಿ ಇವರಿಂದ ನೊಂದಾಯಿತ ಕ್ರಯ ಪತ್ರ ಸಂಖ್ಯೆ 708/97-98 ದಿನಾಂಕ 12-05-1997 ರಲ್ಲಿ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ. ಮುಂದುವರೆದು ಸದರಿ ಜಮೀನಿನ ಹಕ್ಕು ಬದಲಾವಣೆ ಕೋರಿ ಅರ್ಜಿ ಸಲ್ಲಿಸಲಾಗಿ ಕಂದಾಯ ನಿರೀಕ್ಷಕರು ಬಳ್ಳಾರಿ ಇವರು ವ್ಯವಸಾಯ ಜಮೀನನ್ನು ವ್ಯವಸಾಯೇತರ ಜಮೀನಾಗಿ ಪರಿವರ್ತಿಸದೆ ಮನೆಯ ಪ್ಲಾಟ್ ಮಾಡಿ ಮಾರಾಟ ಮಾಡಿರುತ್ತಾರೆಂದು ಸದರಿ ಹಕ್ಕು ಬದಲಾವಣೆಯನ್ನು ಗೈರು ಮಂಜೂರು ಮಾಡಿರುತ್ತಾರೆ.

ಮೇಲ್ಮನವಿ ದಾರರು ಕಂದಾಯ ನಿರೀಕ್ಷಕರ ಎಂ.ಆರ್.ನಂ.49/97-98 ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುತ್ತಾ, ನೊಂದಾಯಿತ ಕ್ರಯ ಪತ್ರದಂತೆ ಹಕ್ಕುಬದಲಾವಣೆ ಮಾಡಿ ಕಂದಾಯ ದಾಖಲೆ (ಪಹಣಿ)ಯಲ್ಲಿ ಹೆಸರನ್ನು ನಮೂದಿಸುವಂತೆ ಕೋರಿರುತ್ತಾರೆ. ಆದರೆ ಮೇಲ್ಮನವಿಯನ್ನು ಪರಿಶೀಲಿಸಲಾಗಿ ವಿವಾದಾಸ್ಪದ ಜಮೀನನ್ನು ಭೂ ಪರಿವರ್ತನೆಯಾಗಿರುವುದಿಲ್ಲ, ತುಂಡುಭೂಮಿಯನ್ನು ಖರೀದಿಸಿರುವುದು ಕಂಡುಬಂದಿರುತ್ತದೆ ಕಾರಣ ಈ ಕೆಳಕಂಡ ಆದೇಶ.

ಮುಂದಿನ ಪುಟಕ್ಕೆ...